ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸಾಮ್ಯಕ್ಕೆ ಒಳಪಟ್ಟಿದೆ)

Telephone No.: 0836-2223867, 2223865

HUBLI ELECTRICITY SUPPLY COMPANY LIMITED

(Wholly owned Govt. of Karnataka undertaking)

E-mail ID: gmadmhr.hescom@gmail.com

Company Identity Number(CIN): U31401KA2002SGC030437


ಕ್ರಮ ಸಂಖ್ಯೆ: ಹೆಚ್.ಸಿ.ಓ.07/ಸಿ-99/2018-19

ದಿನಾಂಕ: 08 JUN 2021

# ಸುತ್ತೋಲೆ

ವಿಷಯ: ನಿವೃತ್ತರಾಗುವ ಅಧಿಕಾರಿಗಳ/ನೌಕರರ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ಶೀಘ್ರಗತಿಯಲ್ಲಿ ಇತ್ಯರ್ಥಗೊಳಿಸುವ ಕುರಿತು.

ಉಲ್ಲೇಖ:
1. ನೌಕರರ ಸೇವಾ ನಿಯಮಗಳ ನಿಬಂಧನೆ 239 ಮತ್ತು 240.
2. ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.), ಕವಿಪ್ರನಿನಿ ರವರ ಸುತ್ತೋಲೆ ದಿನಾಂಕ: 05.03.2020.

******

ನಿಗಮದ ಅಧಿಕಾರಿ/ನೌಕರರು ಸೇವೆಯಿಂದ ವಯೋನಿವೃತ್ತಿ ಹೊಂದುವ ಸಮಯದಲ್ಲಿ ಅವರ ಪಿಂಚಣಿ ಮಂಜೂರಾತಿ ಕಡತಗಳನ್ನು ತಯಾರಿಸುವ ಮತ್ತು ಸಲ್ಲಿಸುವ ಪ್ರಕ್ರಿಯಗೆ ಸಂಬಂಧಿಸಿದಂತೆ ನಿಗಮದ ಬಿಇಎಸ್.ಆರ್ ನಿಬಂಧನೆ 239 ಮತ್ತು 240 ರಲ್ಲಿ ವಿವರವಾಗಿ ಕ್ರಮಗಳನ್ನು ನಿಗದಿಪಡಿಸಲಾಗಿದೆ. ಈ ಸಂಬಂಧ ಆಗಿಂದ್ದಾಗೆ ಕವಿಪ್ರನಿನಿ ನಿಗಮದಿಂದ ಹಲವು ಸುತ್ತೋಲೆಗಳನ್ನು ಹೊರಡಿಸಿದರೂ ಕೂಡ ಸರಿಯಾಗಿ ಕ್ರಮವನ್ನು ತೆಗೆದುಕೊಳ್ಳದೆ ನಿವೃತ್ತಿಯಾಗುವ ಕೆಲವು ದಿನಗಳ ಮೊದಲು ಪಿಂಚಣಿ ಕಡತಗಳನ್ನು ವಿಭಾಗ/ವೃತ್ತ/ವಲಯ ಕಛೇರಿಗಳಿಂದ ಸಲ್ಲಿಸಲಾಗುತ್ತದೆ. ಆನಂತರ ವಯೋನಿವೃತ್ತಿ ದಿನಾಂಕದಂದೆ ಪಿಂಚಣಿ ಮಂಜೂರಾತಿಗಾಗಿ ಒತ್ತಡತರುವುದು ಸರ್ವೇಸಾಮಾನ್ಯವಾಗಿದೆ. ಇದರಿಂದ ಪಿಂಚಣಿ ಮಂಜೂರಾತಿ ಮತ್ತು ಅಧೀಕರಿಸುವ ಪ್ರಾಧಿಕಾರಿಗಳು ಸಂಬಂಧಿಸಿದ ದಾಖಲೆ/ದಸ್ತಾವೇಜುಗಳನ್ನು ಪೂರ್ಣ ಪ್ರಮಾಣದಲ್ಲಿ ಪರಿಶೀಲಿಸಿ ಪಿಂಚಣಿ ಮಂಜೂರಾತಿ ಮತ್ತು ಅಧೀಕರಿಸಲು ಕಷ್ಟವಾಗುತ್ತದೆ ಮತ್ತು ಸಕಾಲದಲ್ಲಿ ಪಿಂಚಣಿ ಮಂಜೂರಾತಿ ನೀಡಲು ಸಾಧ್ಯವಾಗದೇ ನಿವೃತ್ತಿ ಅಧಿಕಾರಿ/ನೌಕರರಿಗೂ ತೊಂದರೆಯಾಗುತ್ತದೆ.

ನಿವೃತ್ತರಾಗಲಿರುವ ಅಧಿಕಾರಿ/ ನೌಕರರಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ/ ಲೋಕಾಯುಕ್ತ/ ಸಿಬಿ/ ಕ್ರಿಮಿನಲ್ ಮೊಕದ್ದಮೆ ಇತರೆ ಸಂಬಂಧಿತ ಪ್ರಕರಣಗಳು ಬಾಕಿಯಿದೆಯೇ ಇಲ್ಲವೆ ಎಂಬುದನ್ನು ಸಹ ಪಿಂಚಣಿ ಮಂಜೂರಾತಿ ಪ್ರಾಧಿಕಾರವು ಖಚಿತಪಡಿಸಿಕೊಳ್ಳುವುದು ಒಂದು ಪ್ರಮುಖ ಅಂಶವಾಗಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ಕವಿಪ್ರನಿನಿಯ ದಿನಾಂಕ:15.12.2010 ರ ಸುತ್ತೋಲೆಯಲ್ಲಿ ನಮೂದಿಸಿರುವ ವಿಶೇಷ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸಾಮಾನ್ಯ ಪ್ರಕರಣಗಳಲ್ಲಿ ನಿಗದಿಪಡಿಸಿದ ನಿಯಾಮಾವಳಿಗಳನ್ನು ಕಡ್ಡಾಯವಾಗಿ ಸಲ್ಲಿಸಲು ಎಲ್ಲಾ ನಿಯಂತ್ರಣ ಅಧಿಕಾರಿಗಳಿಗೆ ಮತ್ತು ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳಿಗೆ ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

ಮೇಲೆ ಸೂಚಿಸಿರುವ ಅಗತ್ಯ ಕ್ರಮಗಳನ್ನು ನಿಗದಿತ ಕಾಲದಲ್ಲಿ ಸಂಬಂಧಿಸಿದ ಅಧಿಕಾರಿಗಳು ತೆಗೆದುಕೊಂಡಲ್ಲಿ ಪಿಂಚಣಿ ಕಡತಗಳ ಪರಿಶೀಲನೆ ಕಾರ್ಯ ಸುಸೂತ್ರವಾಗಲಿದ್ದು, ಸಂಬಂಧಿಸಿದ ಅಧಿಕಾರಿ/ನೌಕರರುಗಳಿಗೆ ನಿಗದಿತ ಅವಧಿಯೊಳಗೆ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ನೀಡಬಹುದಾಗಿರುತ್ತದೆ.

(ಪು.ತಿ.ನೋ)

ಆದರೂ ಸಹ ಹಲವಾರು ಪ್ರಕರಣಗಳಲ್ಲಿ ಪಿಂಚಣಿ ಸವಲತ್ತುಗಳನ್ನು ಇತ್ಯರ್ಥಪಡಿಸುವಲ್ಲಿ ಸಂಬಂಧಪಟ್ಟ ಪಿಂಚಣಿ ಮಂಜೂರಾತಿ ಪ್ರಾಧಿಕಾರಿಯವರು /ಕಛೇರಿ ಮುಖ್ಯಸ್ಥರು/ಸಂಬಳ ಬಟವಾಡೆ ಮಾಡುವ ಅಧಿಕಾರಿಗಳು ನಿಯಮಗಳನ್ನು ಪಾಲಿಸದೆ, ಸಮಾಪನ ವರದಿಗಳನ್ನು ಹಾಗೂ ಇನ್ನಿತರ ದಾಖಲೆಗಳನ್ನು ನಿವೃತ್ತಿಯ ಮೊದಲು ಪಡೆದು ಕ್ರಮಬದ್ಧಗೊಳಿಸದೇ ನಿವೃತ್ತಿದಾರರ/ಕುಟುಂಬ ಪಿಂಚಣಿದಾರರ ಕಡತಗಳನ್ನು ವಿಳಂಬವಾಗಿ ಸಲ್ಲಿಸುತ್ತಿರುವುದು ಈ ಕಛೇರಿಗೆ ಗಮನಕ್ಕೆ ಬಂದಿರುತ್ತದೆ. ಈ ವಿಳಂಬ ನೀತಿಯಿಂದ ಕಾನೂನು ತೊಡಕುಗಳು ಹಾಗೂ ಇನ್ನಿತರ ಮೂಲಗಳಿಂದ ಒತ್ತಡಗಳನ್ನು ಎದುರಿಸುವಂತಾಗಿ ಅನೇಕ ಪತ್ರ ವ್ಯವಹಾರಗಳಿಗೆ ಎಡೆ ಮಾಡಿಕೊಡುತ್ತಿದೆ. ಅಲ್ಲದೆ ಇಂತಹ ಪ್ರಕರಣಗಳ ಬಗ್ಗೆ ನ್ಯಾಯಲಯ/ಕರ್ನಾಟಕ ಸರಕಾರ/ಮಾಹಿತಿ ಹಕ್ಕು ಆಯುಕ್ತರಿಗೆ ಆಗಿಂದಾಗ್ಗೆ ಮಾಹಿತಿಯನ್ನು ಒದಗಿಸಬೇಕಾದ ಸಂದರ್ಭಗಳಲ್ಲಿ ತಲೆ ತಗ್ಗಿಸುವ ಪ್ರಮೇಯಗಳು ಒದಗುವುದು ಸಹಜವಾಗಿರುತ್ತದೆ.

ಆದ್ದರಿಂದ, ಇನ್ನು ಮುಂದೆ ಇಂತಹ ಪ್ರಕರಣಗಳಿಗೆ ಆಸ್ಪದ ನೀಡದಂತೆ ನಿಯಮಾನುಸಾರ ಹಾಗೂ ಆಗಿಂದಾಗ್ಗೆ ಪಿಂಚಣಿ ಇತ್ಯರ್ಥದ ಬಗ್ಗೆ ಕಾಲಕಾಲಕ್ಕೆ ಜಾರಿಗೊಳಿಸುವ ಸುತ್ತೋಲೆಗಳನ್ನು ಪರಿಶೀಲಿಸಿ ನಿಗದಿತ ಅವಧಿಯೊಳಗೆ ತಪ್ಪದೇ ಪಿಂಚಣಿ/ಕುಟುಂಬ ಪಿಂಚಣಿ ಕಡತಗಳನ್ನು ಇತ್ಯರ್ಥಕ್ಕಾಗಿ ಸಲ್ಲಿಸಲು ಸೂಚಿಸಿದೆ. ತಪ್ಪಿದ್ದಲ್ಲಿ ಇದರಿಂದ ಉಂಟಾಗುವ ಎಲ್ಲಾ ಅನಾನುಕೂಲಗಳಿಗೆ ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು/ವೇತನ ಬಟವಾಡೆ ಅಧಿಕಾರಿಗಳು/ಪಿಂಚಣಿ ಮತ್ತು ಕುಟುಂಬ ಪಿಂಚಣಿ ಮಂಜೂರಾತಿ ಪ್ರಾಧಿಕಾರಿಯವರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹುವಿಸಕಂನಿ., ಹುಬ್ಬಳ್ಳಿ ಇವರಿಂದ ಅನುಮೋದಿಸಲ್ಪಟ್ಟಿದೆ."

**ಪ್ರಧಾನ ವ್ಯವಸ್ಥಾಪಕರು**
**(ಆಡಳಿತ ಮತ್ತು ಮಾ.ಸಂ.ಅ)**

ಪ್ರತಿ:

1. ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.), ಕ.ವಿ.ಪ್ರ.ನಿ.ನಿ., ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.
2. ಮುಖ್ಯ ಇಂಜಿನಿಯರ್(ವಿ.), ಹುಬ್ಬಳ್ಳಿ/ ಬೆಳಗಾವಿ ವಲಯ, ಹುವಿಸಕಂನಿ, ಹುಬ್ಬಳ್ಳಿ/ ಬೆಳಗಾವಿ.
3. ಆರ್ಥಿಕ ಸಲಹೆಗಾರರು (ಪಿಂಚಣಿ ಮತ್ತು ಉಪದಾನ ಟ್ರಸ್ಟ್), ಕ.ವಿ.ಪ್ರ.ನಿ.ನಿ ಹಾಗೂ ಎಸ್ಕಾಂ., ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.
4. ಆರ್ಥಿಕ ಸಲಹೆಗಾರರು (ಆಂತರಿಕ ಪರಿಶೋಧನೆ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
5. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
6. ಅಧೀಕ್ಷಕ ಇಂಜಿನೀಯರ್ (ವಿ.)(ಐ.ಟಿ. ಮತ್ತು ಎಮ್.ಟಿ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ- ಮಾಹಿತಿಗಾಗಿ ಹಾಗೂ ಹುವಿಸಕಂನಿ ಅಂತರ್ ಜಾಲದಲ್ಲಿ ಪ್ರಕಟಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಕೋರಿದೆ.
7. ಅಧೀಕ್ಷಕ ಇಂಜಿನಿಯರ್ (ವಿದ್ಯುತ್) (ಪಿ.ಎಮ್.ಸಿ./ ಟಿ & ಪಿ.), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
8. ನಿಯಂತ್ರಣಾಧಿಕಾರಿ (ಲೆಕ್ಕಗಳು ಮತ್ತು ಕಂದಾಯ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
9. ಎಲ್ಲಾ ಅಧೀಕ್ಷಕ ಇಂಜಿನೀಯರ(ವಿ)/ ನಿಯಂತ್ರಣಾಧಿಕಾರಿಗಳು, ಹುವಿಸಕಂನಿ,
10. ಪೊಲೀಸ ಅಧೀಕ್ಷಕರು, ಜಾಗೃತದಳ, ಹುವಿಸಕಂನಿ, ಹುಬ್ಬಳ್ಳಿ.
11. ಎಲ್ಲಾ ಕಾರ್ಯನಿರ್ವಾಹಕ ಇಂಜಿನೀಯರ್(ವಿ.)/ ಉಪ ಲೆಕ್ಕನಿಯಂತ್ರಾಣಾಧಿಕಾರಿಗಳು, ಹುವಿಸಕಂನಿ.,________.
12. ಕಂಪನಿ ಕಾರ್ಯದರ್ಶಿ, ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
13. ಹಿರಿಯ ಆಪ್ತ ಕಾರ್ಯದರ್ಶಿಗಳು (ವ್ಯ.ನಿ./ನಿ(ತಾ)), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ - ಮಾಹಿತಿಗಾಗಿ ಹಾಗೂ ಮಾನ್ಯರ ಅವಗಾಹನೆಗೆ ತರುವುದು.
14. ಮುಖ್ಯ ಆರ್ಥಿಕ ಅಧಿಕಾರಿಗಳು ಮತ್ತು ನಿರ್ದೇಶಕರು(ಹಣಕಾಸು), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ ರವರ ಆಪ್ತ ಕಾರ್ಯದರ್ಶಿಗಳಿಗೆ.
15. ಲೆಕ್ಕಾಧಿಕಾರಿ (ಪಿಂಚಣಿ), ಕಂಪನಿ ಕಾರ್ಯಾಲಯ, ಹುವಿಸಕಂನಿ, ಹುಬ್ಬಳ್ಳಿ.
16. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ.)/ ಲೆಕ್ಕಾಧಿಕಾರಿ, ಹುವಿಸಕಂನಿ,.
17. ಕಛೇರಿ ಪ್ರತಿ/ ಮಹಾ ಕಡತ.